ವಿಚಾರ ಲಹರಿ

# ಕುವೆಂಪು ಪರಂಪರೆ

ಇಪ್ಪತ್ತನೆಯ ಶತಕದ ಕಾಲಮಾನದಲ್ಲಿ ಕನ್ನಡದಲ್ಲಿ ದೊಡ್ಡ ಸೃಜನ ಶಕ್ತಿಯಾಗಿದ್ದವರು ಕುವೆಂಪು. ಈ ಕಾರಣದಿಂದಲೇ ಒಂದು ರೀತಿಯಲ್ಲಿ ಸಾಂಸ್ಕೃತಿಕ ನಾಯಕತ್ವವನ್ನೂ ಪಡೆದಿದ್ದವರು. ಸಹಜವಾಗಿ ಮತ್ತು ಅಯಾಚಿತವಾಗಿ, ಇಂದಿಗೂ ಕುವೆಂಪು ಕನ್ನಡದಲ್ಲಿ ದೊಡ್ಡ ಪ್ರಭಾವವಾಗಿದ್ದಾರೆ. ಆದುದರಿಂದಲೇ ನಾವು ಕುವೆಂಪು ಪರಂಪರೆಗೆ ಸೇರಿದವರೆಂಬ ಮಾತನ್ನು ಹಿರಿಯ ಸಾಹಿತಿಗಳಿಂದಲೇ ಕೇಳುತ್ತೇವೆ. ಈ ಬೆಳವಣಿಗೆ ಕೂಡ ಸಹಜವಾದದ್ದೇ. ಅಪೇಕ್ಷಿತವಾದದ್ದೇ.

ಆದರೆ ಕುವೆಂಪು ಪರಂಪರೆ ಎಂದಾಗ ಅದು ಕೇವಲ ಸರಳವಾದದ್ದಲ್ಲ. ಅದು ಆಳವಾದದ್ದು. ಅದು ಸಂಕೀರ್ಣವಾದದ್ದು. ಅಂದರೆ ಅನೇಕ ಭಿನ್ನ ಎಳೆಗಳು– ಪರವಿರೋಧಿಗಳಂತೆ ಕಾಣುವ ಎಳೆಗಳು ಕೂಡಿ ಆಗಿರುವಂಥದ್ದು. ತರ್ಕಬದ್ಧವಾಗಿರುವಂತೆ ಕಾಣುವ ಎಳೆಗಳ ಜೊತೆಗೆ ತರ್ಕವನ್ನು ಮೀರಿರುವ, ಒಳನೋಟಗಳನ್ನು ನೆಚ್ಚಿರುವ ಆಧ್ಯಾತ್ಮಿಕ ಎಳೆಗಳೂ ಕುವೆಂಪು ಪರಂಪರೆಯಲ್ಲಿ ಬೆರೆತು ಕೊಂಡಿವೆ. ಈ ಸಂಕೀರ್ಣತೆಯನ್ನು ಸರಳೀಕರಣಗೊಳಿಸದೆ ಗ್ರಹಿಸುವುದು ಮತ್ತು ಸ್ವೀಕರಿಸುವುದು ಒಂದು ಸೃಜನಾತ್ಮಕ ಸವಾಲೇ ಸರಿ. ಅಲ್ಲದೆ ಪರಂಪರೆಯನ್ನು ನೆಚ್ಚಿ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಕರ್ಮಕ್ಕೆ ಎರಡೇ ಮುಖಗಳಿರುವುದು, ಮಾಡುವುದು ಅಥವಾ ಮಾಡದೆ ಇರುವುದು, ಒಂದೋ ಕರ್ಮದಲ್ಲಿ ತೊಡಗಿದ್ದೇವೆ ಅಥವಾ ತೊಡಗಿಲ್ಲ– ಇಷ್ಟೇ. ಈ ಎರಡು ರೀತಿಗಳಲ್ಲಿ ಕರ್ಮವು ಸೀಮಿತ. ಅರಿವಿಗೆ ಮಾತ್ರ ಅನೇಕ ಮುಖಗಳು! ಅದು ಒಪ್ಪುವುದು ಅಥವಾ ಒಪ್ಪದಿರುವುದು ಎಂಬ ಪರಸ್ಪರ ವಿಮುಖವಾದ ಎರಡು ನೆಲೆಗಳು ಮಾತ್ರ ಅಲ್ಲ. ಒಪ್ಪುವುದು ಅಥವಾ ಒಪ್ಪದಿರುವುದಕ್ಕಿಂತ ಬೇರೆಯಾಗಿ ಒಪ್ಪುವುದು ಮತ್ತು ಒಪ್ಪದಿರುವುದು, ಇದೆ ಅಥವಾ ಇಲ್ಲ ಎನ್ನುವುದಕ್ಕಿಂತ ಬೇರೆಯಾಗಿ ಇದೆ ಮತ್ತು ಇಲ್ಲ, 'ಪ್ರಶ್ನೆ–ಪ್ರಶ್ನೆಗೆ ಉತ್ತರ' ಎನ್ನುವ ವಿನ್ಯಾಸವನ್ನು ಒಂದು ಮಟ್ಟದಲ್ಲಿ ಒಪ್ಪಿಯೂ ಈ ಪ್ರಶ್ನೆಯಾದರೂ ಏಕೆ ಹುಟ್ಟಿತು ಎಂದು ಪ್ರಶ್ನೆಯನ್ನೇ ಮತ್ತೊಮ್ಮೆ ಪ್ರಶ್ನಿಸುತ್ತಾ ಈಗ ಸಿಗುವ ಉತ್ತರದಲ್ಲಿ ಹೊಸದೇ ಅಂಶಗಳನ್ನು ಕಂಡು ಚಕಿತಗೊಳ್ಳುವುದು– ಹೀಗೆ ವಿಮುಖವೆಂದು ಕಾಣುವ ನೆಲೆಗಳನ್ನು ಪರಸ್ಪರ ಅಭಿಮುಖಗೊಳಿಸಿಯೂ 'ಅರಿವು' ವ್ಯವಹಾರ ಮಾಡಬಲ್ಲುದು. ಮಾಡಬೇಕು. ಏಕೆಂದರೆ ಇದು ಅರಿವಿನ ಸಾಧ್ಯತೆ! ಅರಿವಿಗೆ ತರ್ಕಬದ್ಧವಾಗಿ ವಿಚಾರ ಮಾಡುವ, ತಾರ್ಕಿಕವಾದ ತೀರ್ಮಾನಗಳಿಗೆ ಬರಬೇಕಾದ ಅಗತ್ಯ ಎಷ್ಟಿದೆಯೋ, ತನ್ನ ತರ್ಕವನ್ನೇ ಮರಳಿ ಒರೆಗೆ ತಿಕ್ಕುವ, ಸಾಧ್ಯವಾದರೆ ಬುಡಮೇಲುಗೊಳಿಸುವ, ಮರಳಿ ಮರಳಿ ವಿಚಾರ ಮಾಡುವ, ಮಾಡುತ್ತ ತನ್ನನ್ನು ಮೀರುವ, ಮೀರುತ್ತಲೇ ಹೊಸ ತರ್ಕಗಳನ್ನು ಕಾಣಿಸುವ ತುಡಿತವೂ ಅಷ್ಟೇ ಇದೆ. ವಿರೋಧಗಳನ್ನು ನಿಟ್ಟಿಸಿ ನೊಡಿ, ಅವುಗಳಿಗೆ ಹೊಸ ಸಂಬಂಧಗಳನ್ನು ಕಂಡುಕೊಳ್ಳುವುದು 'ಅರಿವಿ'ಗೆ ಜೀವಾಳವಾದ ಸಂಗತಿಯಾಗಿದೆ!

ಈಗ, ಕುವೆಂಪು ಅವರನ್ನು ನಾಸ್ತಿಕರೆನ್ನೋಣವೆ? ಆಸ್ತಿಕರೆನ್ನೋಣವೆ? ಕುವೆಂಪು ಅವರ ವಿಜ್ಞಾನದ ಮೇಲಿನ ಪ್ರೀತಿ, ಮೌಢ್ಯ–ಕಂದಾಚಾರಗಳ ಕುರಿತಾದ ತೀವ್ರವಾದ ಅಸಹನೆ, ಚಾತುರ್ವರ್ಣ್ಯ, ಜಾತಿ ವ್ಯವಸ್ಥೆ, ಮೇಲು–ಕೀಳು ಭಾವನೆಗಳನ್ನು ಕುರಿತ ಒಮ್ಮತದ ಧಿಕ್ಕಾರ, ಇಂಥ ಮೌಢ್ಯಗಳೆಲ್ಲ ಹಿಂದೂ ಧರ್ಮದ ಅವಿಭಾಜ್ಯ ಅಂಗವೆನ್ನುವುದಾದರೆ ಇವುಗಳನ್ನು ಎಂದೆಂದೂ ಒಪ್ಪದ ತಾನು 'ಹಿಂದೂ' ಅಲ್ಲ ಎಂದು ಹೇಳಿ ಸುತ್ತಲಿನ ಸಮಾಜದಿಂದಲೇ ಸಿಡಿದು ದೂರನಿಲ್ಲಬಲ್ಲ ವೀರಾವೇಶಗಳನ್ನೆಲ್ಲ ನೋಡಿದರೆ ಈ ಎಲ್ಲ ಧೋರಣೆಗಳ ತಾರ್ಕಿಕ ಅಂತ್ಯವೆಂಬಂತೆ ಕುವೆಂಪು ಅವರು ನಾಸ್ತಿಕರು ಎನ್ನಬೇಕಾಗುತ್ತದೆ. ಈ ಧೋರಣೆಗಳಿಗೂ ನಾಸ್ತಿಕತೆಗೂ ಸಹಜನಂಟು ಎನ್ನಬಹುದಲ್ಲವೆ? ಆದರೆ ಖಂಡಿತ ಕುವೆಂಪು ನಾಸ್ತಿಕರಲ್ಲ!

ಒಂದೆಡೆ ಕುವೆಂಪು ಬರೆದಿದ್ದಾರೆ: 'ನಾನು ಬದುಕಿಗಾಗಿ, ಬದುಕಿನ ಆಚೆಯ ಬದುಕಿಗಾಗಿ ಬರೆಯುತ್ತಿದ್ದೇನೆ' ಇಲ್ಲಿ ಬದುಕಿನಾಚೆಯ ಬದುಕೆಂದರೇನು? ಈ ಮಾತಿಗೆ ಮುಂದಿನ ಜನಾಂಗದ ಭವಿಷ್ಯದ ಬದುಕು ಎಂದು ದೂರಾನ್ವಯದ ಅರ್ಥವನ್ನು ಮಾಡಿದರೂ ಹಾಗೆಂದೇ ಸ್ಪಷ್ಟವಾಗಿ ಹೇಳಬಹುದಾಗಿತ್ತೆನ್ನಿಸಿ, ಆದುದರಿಂದ ಬದುಕಿನಾಚೆಯ ಬದುಕೆಂದರೆ ಉಪನಿಷತ್ತು ಹೇಳುವಂತೆ ಮೃತ್ಯುವಿನಿಂದ ಅಮೃತತ್ತ್ವದ ಕಡೆಗೆ ಸಾಗುವ ಬದುಕು, ಅಂದರೆ ಆಧ್ಯಾತ್ಮಿಕವಾದ ಬದುಕು, ಸಾವಿನಾಚೆಗೂ ಇರಬಹುದಾದ ಬದುಕು. ಆ ಬದುಕಿಗಾಗಿ ತಾನು ಬರೆಯುತ್ತಿದ್ದೇನೆ ಎಂದರೆ ಅದಕ್ಕಾಗಿ ತಾನು ಬದುಕಿದ್ದೇನೆ ಎಂದೇ ಅರ್ಥವಾಗುತ್ತದೆ. ಇದು ನಾಸ್ತಿಕತೆಯಂತೂ ಅಲ್ಲ. ಇದು ಉಪನಿಷತ್ತಿನ ಆಸ್ತಿಕತೆ!

ಅಷ್ಟೇಕೆ? ತೇಜಸ್ವಿಯವರು 'ಅಣ್ಣನ ನೆನಪು' ಗ್ರಂಥದಲ್ಲಿ ಹೀಗೆ ದಾಖಲಿಸಿದ್ದಾರೆ.

'ಅಣ್ಣ ದೇವಸ್ಥಾನಗಳಿಗೆ ಹೋಗುವುದು, ಪೂಜೆ ಮಾಡಿಸುವುದು ಅಥವಾ ಮನೆಗೇ ಅರ್ಚಕರನ್ನು ಕರೆಯಿಸಿ ಪೂಜೆ ಮಾಡಿಸುವುದು– ಇದಕ್ಕೆಲ್ಲ ಸಂಪೂರ್ಣ ವಿದಾಯ ಹೇಳಿದ್ದರು. ಅಲ್ಲದೆ ಇದನ್ನೆಲ್ಲಾ ಮಾಡಿಸುವವರು ಪಕ್ಕಾ ಮೋಸಗಾರರು ಇಲ್ಲವೇ ಪಕ್ಕಾ ಮೂಢರು ಎಂದು ನಂಬಿದ್ದರು. ಇವೊತ್ತಿಗೂ ಇಲ್ಲಿಯವರೆಗೆ ಈ ಕುರಿತ ಅಣ್ಣನ ನಂಬಿಕೆಗೆ ವ್ಯತಿರಿಕ್ತವಾದ ಒಂದೇ ಒಂದು ಉದಾಹರಣೆಯನ್ನೂ ನಾನು ನೋಡಿಲ್ಲ.

ನಮ್ಮ ಮನೆಯಲ್ಲಿ ಅಣ್ಣನೇ ದೇವರ ಪೂಜೆ ಮಾಡುತ್ತಿದ್ದರು. ಪೂಜೆ ಮಾಡುವಾಗ ಮೊದಲೆಲ್ಲಾ ನಾವು ನಾಲ್ಕು ಜನ ಮಕ್ಕಳೂ ಅಮ್ಮನ ಜೊತೆ ಕುಳಿತುಕೊಳ್ಳುತ್ತಿದ್ದೆವು. ಅಣ್ಣ ಹೇಳಿ ಕೊಟ್ಟ ಉಪನಿಷತ್ತಿನ ಮಂತ್ರಗಳು, ದೇವೀಸ್ತೋತ್ರ, ಭಗವದ್ಗೀತೆಯ ಕೆಲವು ಭಾಗಗಳನ್ನು ನಾವೂ ಅಣ್ಣನ ಜೊತೆ ಹೇಳುತ್ತಿದ್ದೆವು. ಅಣ್ಣ ಮಂಗಳಾರತಿ ಎತ್ತಿ ಒಂದು ತೆಂಗಿನಕಾಯಿ ಒಡೆಯುತ್ತಿದ್ದರು. ಅದರ ನೀರನ್ನು ನಮಗೆಲ್ಲಾ ತೀರ್ಥ ಕೊಡುತ್ತಿದ್ದರು.

ಆಮೇಲೆ ನಿಧಾನವಾಗಿ ಅಣ್ಣನ ವೈಚಾರಿಕತೆಯ ಪರಿಚಯವಾದ ನಂತರ ಅಣ್ಣನ ಪೂಜೆ, ಧ್ಯಾನ, ಭಕ್ತಿ ಇತ್ಯಾದಿಗಳನ್ನೆಲ್ಲಾ ಪರ್ಯಾಲೋಚಿಸಿ, ಹಾಗಿದ್ದರೆ ಅಣ್ಣನ ನಿಲುವೇನು? ಅಣ್ಣನ ಈ ವಿಚಿತ್ರ ನಿಲುವಿನ ಅರ್ಥವೇನೆಂದು ಚಿಂತಿಸುತ್ತ ಚಿಂತಿಸುತ್ತ ಇದನ್ನು ಜೀವಮಾನದಲ್ಲಿ ನಾನೆಂದೂ ಸಮರ್ಪಕವಾಗಿ ಅರ್ಥಮಾಡಿಕೊಳ್ಳಲಾರದೆ ವಿಶ್ವದ ಚಿದಂಬರ ರಹಸ್ಯಕ್ಕೆ ಅಭಿಮುಖನಾದೆ!'

ತೇಜಸ್ವಿಯವರ ಈ ಕೊನೆಯ ವಾಕ್ಯ ಮಹತ್ವದ್ದು. ವಿಶ್ವದ ರಹಸ್ಯಕ್ಕೆ ಅಭಿಮುಖನಾದೆ ಎನ್ನುವ ಮನೋಧರ್ಮವನ್ನೇ 'ಬದುಕಿನಾಚೆಯ ಬದುಕಿಗಾಗಿ ಬರೆಯುತ್ತಿದ್ದೇನೆ' ಎನ್ನುವಲ್ಲಿ ಕುವೆಂಪು ಸೂಚಿಸುತ್ತಿರುವುದು. ರಹಸ್ಯಕ್ಕೆ ಅಭಿಮುಖವಾಗುವ 'ವಿನಯ'ದಲ್ಲಿ ನಾಸ್ತಿಕ–ಆಸ್ತಿಕ ವಾದಭೇದಗಳು ಕರಗಿ ಹೋಗುವವು!

ಶಂಕರರು ತಮ್ಮೊಂದು ಸ್ತುತಿಯಲ್ಲಿ ಅಪೂರ್ವವಾದ ಒಂದು ಮಾತನ್ನು ಹೇಳುತ್ತಾರೆ: 'ನಾನು ನಿನ್ನವನು. ಆದರೆ ನೀನು ನನ್ನವನಲ್ಲ– ನೀನು ಎಲ್ಲರವನು'... ಎಂಬ ಮಾತು. 'ತಾವು ಕುವೆಂಪು ಪರಂಪರೆಗೆ ಸೇರಿದವರು ಎಂದುಕೊಳ್ಳುವ ನಾವು ಆಧುನಿಕರು– ಈ ಮಾತನ್ನೆ ಬದಲಿಸಿ ಅಥವಾ ಈ ಮಾತಿನಿಂದ ಮುಂದೆ ಬಂದು ನಾನು ನಿನ್ನವನು ಮತ್ತು ನಿನ್ನನ್ನು ಹುಡುಕುತ್ತಿರುವವನು ಕೂಡಾ' ಎಂಬ ಧೋರಣೆಯನ್ನು ತಳೆದರೆ ವಿನಯಕ್ಕೆ ಕುಂದೇನೂ ಇಲ್ಲ.

■ **ತೋಷ**

## ಮಾತೇ ಮುತ್ತು

★ ಯಾವುದೇ ಘಟನೆಯ ಬಗ್ಗೆ ಭವಿಷ್ಯ ನುಡಿಯುವುದು ಸರಿಯಲ್ಲ. ಬೇಕಿದ್ದರೆ ಘಟನೆ ನಡೆದ ಬಳಿಕ ಅದರ ಭವಿಷ್ಯ ನುಡಿಯಿರಿ.

-ವಿನ್‌ಸ್ಟನ್ ಚರ್ಚಿಲ್

★ ವರುಷಕೊಂದು ಹೊಸತು ಜನ್ಮ, ಹರುಷಕೊಂದು ಹೊಸತು ನೆಲೆಯು ಅಖಿಲ ಜೀವಜಾತಕೆ. ಒಂದೆ ಒಂದು ಜನ್ಮದಲ್ಲಿ ಒಂದೆ ಬಾಲ್ಯ ಒಂದೆ ಹರೆಯ, ನಮಗದಷ್ಟೆ ಏತಕೊ.

-ದ.ರಾ.ಬೇಂದ್ರೆ

★ ಕೇವಲ ಸಂಬಳಕ್ಕಾಗಿ ಮಾಡುವ ಎಲ್ಲ ಕೆಲಸಗಳೂ ಮನಸ್ಸನ್ನು ಕುಂಠಿತಗೊಳಿಸುತ್ತವೆ.

-ಅರಿಸ್ಟಾಟಲ್

★ ಇತರರು ಎಸೆದ ಇಟ್ಟಿಗೆಗಳಿಂದ ಗಟ್ಟಿಯಾದ ಅಡಿಪಾಯ ನಿರ್ಮಿಸುವವನೇ ನಿಜವಾದ ಯಶಸ್ವಿ ಮನುಷ್ಯ.

-ಡೇವಿಡ್ ಬ್ರಿಂಕ್ಲೀ

★ ಶಾಂತಿ ನಿಮ್ಮ ಒಳಗಿನಿಂದಲೇ ಬರುತ್ತದೆ. ಅದನ್ನು ಹೊರಗೆಲ್ಲ ಹುಡುಕಬೇಡಿ.

-ಗೌತಮ ಬುದ್ಧ

★ ನೀನು ಸಮುದ್ರದಲ್ಲಿ ಒಂದು ಬಿಂದು ಅಲ್ಲ; ಒಂದು ಬಿಂದುವಿನಲ್ಲಿ ಇಡೀ ಸಮುದ್ರ.

-ಜಲಾಲುದ್ದೀನ್ ರೂಮಿ

★ ಜಗತ್ತು ಕನಸಿನಲ್ಲಿ ನಡೆಯುವ ಒಂದು ನಾಟಕ.

-ಗುರುನಾನಕ್